# ಅಮೂಲ್ಯ ಉಡುಗೊರೆ




ಒಂದಾನೊಂದು ಕಾಲದಲ್ಲಿ ಮೊಘಲ್ ದೇಶದ ಸಮೀಪ ಒಂದು ಹಳ್ಳಿಯಲ್ಲಿ ಸಾವುಲ್ ಎಂಬಾತನು ಇದ್ದನು. ಅವನಿಗೆ ಯಾವಾಗಲೂ ಸಾಹಸ ಮಾಡುವುದೆಂದರೆ ಬಹಳ ಪ್ರೀತಿ.. ಒಂದು ದಿನ ಒಬ್ಬ ಯಾತ್ರಿಕನು ಸಾವುಲ್ ಇರುವ ಹಳ್ಳಿಗೆ ಬಂದಿದ್ದನು. ಅವನು ಅರಬ್ ದೇಶದ ಜನರಿಗೆ ಈರುಳ್ಳಿ ಎಂದರೆ ಏನು ಎಂಬುದು ಗೊತ್ತಿಲ್ಲ ಎಂಬ ಸುದ್ದಿಯನ್ನು ಸಾವುಲ್‌ಗೆ ಹೇಳಿದನು.

ಆಗ ಸಾವುಲ್‌ನು 'ಈರುಳ್ಳಿ ಬಗ್ಗೆ ಗೊತ್ತಿಲ್ಲವೆ! ರುಚಿಯಾದ ಈರುಳ್ಳಿ ಇಲ್ಲದೆ ಜನರು ಆಹಾರವನ್ನು ಹೇಗೆ ತಿನ್ನುತ್ತಾರೆ?' ಎಂದು ತುಂಬಾ ಆಶ್ಚರ್ಯದಿಂದ ಕೇಳಿದನು. ಈರುಳ್ಳಿ ಬಗ್ಗೆ ಅರಿಯದ ಅರಬ್ ದೇಶದ ಜನರಿಗೆ ಅದನ್ನು ತಿಳಿಸಬೇಕೆಂದುಕೊಂಡ ಸಾವುಲ್ ಒಂದು ಗೋಣಿಚೀಲದ ತುಂಬಾ ಈರುಳ್ಳಿಯನ್ನು ತುಂಬಿಕೊಂಡು ಅರಬ್ ದೇಶಕ್ಕೆ ಹೋದನು. ಅಲ್ಲಿ ಅರಬ್ ರಾಜನಿಗೆ ನಮಸ್ಕರಿಸಿ ತಂದ ಈರುಳ್ಳಿಯನ್ನು ರಾಜನ ಮುಂದಿಟ್ಟು 'ನಾನು ನಿಮ್ಮ ಆಹಾರದ ರುಚಿಯನ್ನು ವೃದ್ಧಿಸುವಂತಹ ಒಂದು ಅಮೂಲ್ಯವಾದ ಆಹಾರದ ವಸ್ತು ತಂದಿದ್ದೇನೆ' ಎಂದು ಹೇಳಿದನು. ರಾಜನು ತನ್ನ ಅಡುಗೆಯವರಿಗೆ ಆ ಈರುಳ್ಳಿಯನ್ನು ಉಪಯೋಗಿಸಲು ಕೊಟ್ಟು 'ಒಂದು ವೇಳೆ ನಾನು ಕಾಯಿಲೆ ಬಿದ್ದರೆ ನಿನ್ನ ತಲೆಯನ್ನು ಕತ್ತರಿಸುತ್ತೇನೆ' ಎಂದು ಸಾವುಲ್‌ಗೆ ಎಚ್ಚರಿಸಿದನು.

ಮಾರನೆಯ ದಿನ ಸಾವುಲ್ ಈರುಳ್ಳಿಯಿಂದ ಅನೇಕ ತರಹದ ಭಕ್ಷ್ಯಗಳನ್ನು ಮಾಡಿಸಿ ಒಂದು ದೊಡ್ಡ ಔತಣ ಕೂಟವನ್ನು ಏರ್ಪಡಿಸಿ ಎಲ್ಲರನ್ನೂ ಆಹ್ವಾನಿಸಿದನು. ಭಕ್ಷ್ಯಗಳನ್ನು ತಿಂದ ರಾಜನಿಂದ ಹಿಡಿದು ಸಾಮಾನ್ಯ ಜನರವರೆಗೂ ಎಲ್ಲ ಜನರು ಸಂತೃಪ್ತಿಪಡುವುದನ್ನು ಸಾವುಲ್ ನೋಡಿದನು. ನಂತರ ಎಲ್ಲರೂ ಇನ್ನು ಮುಂದೆ ಈರುಳ್ಳಿ ಇಲ್ಲದೆ ಯಾವ ಆಹಾರ ಪದಾರ್ಥಗಳನ್ನೂ ತಿನ್ನುವುದಿಲ್ಲ ಎಂದು ಹೇಳಿದರು.

ಅರಬ್ ದೇಶದ ರಾಜನಿಗೆ ತುಂಬಾ ಸಂತೋಷವಾಗಿ ಸಾವುಲ್ ತಂದ ಈರುಳ್ಳಿಗೆ ಸಮ ತೂಕದಷ್ಟು ಬಂಗಾರವನ್ನು ಕೊಟ್ಟನು.

ಸಾವುಲ್ ತನ್ನ ಮನೆಗೆ ಹಿಂದಿರುಗಿ ತನ್ನ ಸಾಹಸದ ಬಗ್ಗೆ ಎಲ್ಲಾ ಹಳ್ಳಿಗರಿಗೆ ತಿಳಿಸಿದನು. ಆಗ ಪೀಟರ್ ಎಂಬುವನು, ಅರಬ್ ದೇಶದ ರಾಜ ಈರುಳ್ಳಿಯನ್ನೇ ಇಷ್ಟು ಚೆನ್ನಾಗಿ ಸ್ವಾಗತಿಸಿರಬೇಕಾದರೆ ಇನ್ನು ಬೆಳ್ಳುಳ್ಳಿಯನ್ನು ಎಷ್ಟು ಮೆಚ್ಚಿಕೊಳ್ಳಬಹುದು. ಬೆಳ್ಳುಳ್ಳಿಯು ಆಹಾರದ ರುಚಿಯನ್ನು ಇನ್ನೂ ಹೆಚ್ಚಿಸುತ್ತದೆ. ಅರಬ್ ದೇಶದ ರಾಜನು ತನಗೆ ಅರ್ಧ ರಾಜ್ಯವನ್ನೇ ಕೊಡಬಹುದು ಎಂದು ಯೋಚಿಸಿದ. ಪೀಟರನು ಐದು ಗೋಣಿಚೀಲದ ಭರ್ತಿ ಬೆಳ್ಳುಳ್ಳಿಯನ್ನು ತೆಗೆದುಕೊಂಡು ಅದೇ ಸ್ಥಳಕ್ಕೆ ತೆಗೆದುಕೊಂಡು ಹೋದನು. ರಾಜನು ಬೆಳ್ಳುಳ್ಳಿಯನ್ನು ಜನರಿಗೆ ಪರಿಚಯಿಸಲು ಒಪ್ಪಿಕೊಂಡನು. ನಂತರ ಅರಬ್ ದೇಶದ ರಾಜನಿಂದ ಹಿಡಿದು ಎಲ್ಲಾ ಜನರು ಬೆಳ್ಳುಳ್ಳಿ ಅಡುಗೆಯನ್ನು ಹೊಗಳಿ ತಿಂದು ಇದು ಈರುಳ್ಳಿಗಿಂತ ಚೆನ್ನಾಗಿ ರುಚಿಯಾಗಿದೆ ಎಂದರು.

ನಂತರ ಅರಬ್ ರಾಜನು ಇತರ ಮಂತ್ರಿಗಳ ಬಳಿ ಪೀಟರ್‌ನಿಗೆ ಬಂಗಾರಕ್ಕಿಂತ ಅಮೂಲ್ಯವಾದ ಉಡುಗೊರೆಯನ್ನು ಕೊಡುವುದಾಗಿ ಹೇಳಿದನು. ಎಲ್ಲರೂ ಕುತೂಹಲದಿಂದ ಎದುರು ನೋಡುತ್ತಿದ್ದರು. ನಂತರ ಅರಬ್ ರಾಜನು ಪೀಟರ್‌ನಿಗೆ ಐದು ಗೋಣಿ ಚೀಲದ ತುಂಬಾ ಈರುಳ್ಳಿಯನ್ನು ಉಡುಗೊರೆಯಾಗಿ ಕೊಟ್ಟು ಕಳಿಸಿದನು.

**-ವೈ.ಎನ್. ಸುಂದರೇಶನ್, ಮೈಸೂರು**

## ನಿಮಗೆಷ್ಟು ಗೊತ್ತು — ಒಂದು ನಿಮಿಷದ ಮಹತ್ವ

1. ಮನುಷ್ಯನ ಹೃದಯ ಒಂದು ನಿಮಿಷಕ್ಕೆ 72 ಸಲ ಬಡಿದುಕೊಳ್ಳುತ್ತದೆ.
2. ಆಕಳು, ಕೋಳಿ, ಪಾರಿವಾಳ ಮತ್ತು ಇಲಿಗಳು ಕ್ರಮವಾಗಿ ಒಂದು ನಿಮಿಷಕ್ಕೆ 20, 50, 60, 20 ಬಾರಿ ಶ್ವಾಸ ತೆಗೆದುಕೊಳ್ಳುತ್ತವೆ.
3. ಜಗತ್ತಿನಲ್ಲಿ ಒಂದು ನಿಮಿಷದಲ್ಲಿ 5310 ಜನರು ಸಾಯುತ್ತಾರೆ.
4. ಪ್ರಪಂಚದಲ್ಲಿ ಒಂದು ನಿಮಿಷಕ್ಕೆ 10,80,000 ಪತ್ರಗಳು ವಿತರಣೆಯಾಗುತ್ತವೆ.
5. ಧ್ವನಿಯು ಒಂದು ನಿಮಿಷಕ್ಕೆ 12 ಮೈಲು ಸಂಚರಿಸುತ್ತದೆ.
6. ಪೃಥ್ವಿಯು ಒಂದು ನಿಮಿಷಕ್ಕೆ 121 ಕಿ.ಮೀನಷ್ಟು ತಿರುಗುತ್ತದೆ.
7. ಪ್ರಪಂಚದಲ್ಲಿ ಒಂದು ನಿಮಿಷಕ್ಕೆ 7625 ಮಕ್ಕಳು ಜನ್ಮ ತಾಳುತ್ತವೆ.
8. ಜಗತ್ತಿನಲ್ಲಿ ಒಂದು ನಿಮಿಷಕ್ಕೆ 10,25,000 ಸಾವಿರ ಜನ ಚಹ ಹಾಗೂ ಕಾಫಿ ಕುಡಿಯುವರು.
9. ಭೂಮಿಯು ಒಂದು ನಿಮಿಷಕ್ಕೆ ಸೂರ್ಯನಿಗೆ 1737 ಕಿಮೀ ವೇಗದಿಂದ ಪ್ರದಕ್ಷಿಣೆ ಹಾಕುತ್ತದೆ.
10. ಒಂದು ನಿಮಿಷಕ್ಕೆ ವಿಶ್ವದ ಎಣ್ಣೆ ಬಾವಿಗಳಿಂದ 3600 ಟನ್ ಎಣ್ಣೆಯನ್ನು ಹೊರತೆಗೆಯಲಾಗುತ್ತದೆ.
11. ವಿಶ್ವದ ಕಲ್ಲಿದ್ದಲು ಗಣಿಗಳಿಂದ ಒಂದು ನಿಮಿಷಕ್ಕೆ 4000 ಟನ್ ಕಲ್ಲಿದ್ದಲನ್ನು ಹೊರತೆಗೆಯಲಾಗುತ್ತದೆ.
12. ಭಾರತದ ಭಿಲಾಯಿ ಕಾರ್ಖಾನೆಯಲ್ಲಿ ಒಂದು ನಿಮಿಷಕ್ಕೆ 650 ಕಚ್ಚಾ ಕಬ್ಬಿಣ ಹಾಗೂ 1000 ಟನ್ ಉಕ್ಕು ಹೊರಬೀಳುತ್ತದೆ.

(ಸಂಗ್ರಹ): **ಮಹೇಶ್ ಎಸ್.ಹೆಚ್. ಕೊಟ್ಟೂರು**



# ಆಟವೆಲ್ಲಿ ಹೋಯಿತು?

ಆಟವೆಲ್ಲಿ ಹೋಯಿತು
ಆಟವೆಲ್ಲಿ ಹೋಯಿತು
ಚಿನ್ನಿ ದಾಂಡು ಗೋಲಿ ಗಜುಗ
ಆಟವೆಲ್ಲಿ ಹೋಯಿತು?

ಚೌಕಾಬಾರ ಚನ್ನಮಣೆ
ಚಾಳಿ ಠೂ ಬಿಟ್ಟಿತು
ಕಲ್ಲಿನಾಟ ಪಗಡೆಯಾಟ
ಪಾಳಿ ಬಿಟ್ಟು ಓಡಿತು

ಆರುಗೋಲು ಮಾರುಗೋಲು
ಮಾರುದೂರ ಓಡಿತು
ನಾಕು ಮೂಲೆಯಾಟವಂತೂ
ಮೂಲೆ ಸೇರಿಬಿಟ್ಟಿತು

ಉಪ್ಪುಕೊಡು ಆಟವೀಗ
ನೀರಿನಲ್ಲಿ ಕರಗಿತು
ಬುಗುರಿ ಕಾಲು ಕಳಚಿಕೊಂಡು
ಕುಂಟನಾಗಿ ಬಿಟ್ಟಿತು

ಕಣ್ಣಾಮುಚ್ಚೆ ಕಾಡೆಗೂಡೆ
ಕಾಡು ಸೇರಿಕೊಂಡಿತು
ಆಟವೆಲ್ಲಿ ಹೋಯಿತು
ಆಟವೆಲ್ಲಿ ಹೋಯಿತು

**-ಸುಮಾ ಕಳಸಾಪುರ, ಶಿವಮೊಗ್ಗ**




# ಜನಪರ ಕಾಳಜಿ




ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಮಂತ್ರಿಯಾಗಿದ್ದ ಸಮಯ. ಒಂದು ದಿನ ಶಾಸ್ತ್ರಿಯವರ ಮಗ ತಂದೆಯ ಬಳಿಗೆ ಬಂದು 'ಅಪ್ಪ ನನಗೆ ಒಂದು ಬೈಕ್ ಕೊಡಿಸಿ' ಅಂತ ಕೇಳಿದನು. ಆಗ ಶಾಸ್ತ್ರಿಯವರು ಹೇಳಿದ್ದು ಏನು ಗೊತ್ತಾ? 'ಮಗನೇ ಜನರು ಕೊಡುವ ಹಣದಿಂದ ನಾವು ಹೊಟ್ಟೆ ತುಂಬಿಸಿಕೊಳ್ತಾ ಇದೀವಿ. ಹೀಗಿರುವಾಗ ನಿನಗೆ ಬೈಕ್ ಕೊಡಿಸುವಷ್ಟು ಹಣ ನನ್ನ ಹತ್ತಿರ ಇಲ್ಲ' ಎಂದರು.

ಆಗ ಬೇಜಾರು ಮಾಡಿಕೊಂಡ ಮಗ ತನ್ನ ತಾಯಿಗೆ ಆ ವಿಷಯವನ್ನು ತಿಳಿಸಿದನು. ಆಗ ತಾಯಿ ತನ್ನಲ್ಲಿರುವ ಹಣದಿಂದ ಒಂದು ಬೈಕ್ ಕೊಡಿಸಿದರು. ಈ ವಿಚಾರವನ್ನು ಕಂಡು ಶಾಸ್ತ್ರಿಯವರಿಗೆ ಅಚ್ಚರಿಯಾಗಿ ತಮ್ಮ ಪತ್ನಿಗೆ ಕೇಳಿದರು. 'ನನ್ನ ಹತ್ತಿರ ಹಣವೇ ಇರಲಿಲ್ಲ. ಆದರೆ ಒಂದು ಬೈಕ್ ಕೊಡಿಸುವಷ್ಟು ಹಣ ನಿನ್ನಲ್ಲಿ ಹೇಗೆ ಬಂತು?' ಎಂದು ಕೇಳಿದರು. ಆಗ ಶಾಸ್ತ್ರಿಯವರ ಪತ್ನಿ 'ನೀವು ಮನೆಯ ಖರ್ಚಿಗಾಗಿ ಕೊಡುತ್ತಿದ್ದ ಹಣದಲ್ಲಿ ಸ್ವಲ್ಪ ಸ್ವಲ್ಪ ಉಳಿಸುತ್ತಿದ್ದೆ. ಆ ಹಣದಿಂದಲೇ ಮಗನಿಗೆ ಬೈಕ್ ಕೊಡಿಸಿದೆ' ಎಂದು ಹೇಳಿದರು. ಮರುದಿನವೇ ಶಾಸ್ತ್ರಿಯವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದರು, 'ಸರ್ಕಾರ ನನಗೆ ನೀಡುತ್ತಿರುವ ಸಂಬಳ ನನ್ನ ಕುಟುಂಬದ ಖರ್ಚಿಗೆ ವಿನಿಯೋಗವಾಗಿ ಇನ್ನೂ ಹೆಚ್ಚಿಗೆ ಉಳಿಯುತ್ತಿದೆ. ದಯವಿಟ್ಟು ಆ ಹೆಚ್ಚಿನ ಹಣವನ್ನು ನನ್ನ ಸಂಬಳದಿಂದ ಕಡಿಮೆ ಮಾಡಿ' ಎಂದು ಪತ್ರದಲ್ಲಿ ತಿಳಿಸಿದರು.

**-ಶ್ರೀಶೈಲ ಎಸ್. ಅಂಗಡಿ, ಬೆಳಗಾವಿ**